ಬೆಂಗಳೂರು ಸಬ್ ಜಡ್ಜ್ಯಿಯವರ ಕೋರ್ಟಿನಲ್ಲಿ.

ಸ್ಯ1909—10ನೆ ಇಸವಿ ಮಿ॥ ಅರ್ಜೀ ನಂಬರ್ 240.

ಬೆಂಗಳೂರು ಕೋಟೇಲಿ ರಿಜರ್ವ್ ಪೊಲೀಸಿನಲ್ಲಿ ಫಸ್ಟ್‌ಕ್ಲಾಸ್ ಕಾನಿಸ್ಟೆಬಲ್ ಆಗಿದ್ದು ಮೃತಪಟ್ಟ ಷೇಕ್‌ಜಾಫರ್ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಜಾಹೀರಬಿ ಮೃತಪಟ್ಟ ಸದರಿ ಷೇಕ್ ಜಾಫರಿಗೆ ಮುಖ್ಯ ವಾರಸಿದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಷೇಕ್‌ಜಾಫರ್ರ ಜಿಂದಗಿ ಬಗ್ಯಾಗಿ ಬರತಕ್ಕ 153 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಜಾಹೀರಬಿ ಅರ್ಜಿಯನ್ನು ಸ್ಯ 1909ನೆ ಇಸವಿ ನವೆಂಬರು ತಿಂಗಳು ತಾರೀಖು 26 ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಷೇಕ್‌ಜಾಫರ್ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1909ನೆ ಇಸವಿ ನವೆಂಬರ್ ತಿಂಗಳು 15ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1909—10ನೆ ಇಸವಿ ಮಿ॥ ನಂಬರ್ 270

ಎಡತೊರೆಲಿ ಸಬ್ ಅಸಿಸ್ಟೆಂಟ್ ಇಂಜನಿಯರಾಗಿದ್ದು ಮೃತಪಟ್ಟ ಕೆ. ವಾಸುದೇವರಾವ್ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಶ್ರೀನಿವಾಸರಾವ್ ಮೈನರ್ ಗಾರ್ಡಿಯರ್ ಪುಟ್ಟಮ್ಮ ಮೃತಪಟ್ಟ ಸದರೀ ವಾಸುದೇವರಾವ್‌ಗೆ ಮುಖ್ಯ ವಾರಸುದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಕೆ. ವಾಸುದೇವರಾವ್ ಜಿಂದಗಿ ಬಗ್ಯಾಗಿ ಬರತಕ್ಕ (3,087) ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಶ್ರೀನಿವಾಸರಾವ್, 2ನೆ ವೆಂಕಟರಾವ್, 3ನೆ ಕೇಶವರಾವ್ ಮೈನರ್, ಗಾರ್ಡಿಯರ್ ಪುಟ್ಟಮ್ಮ ನವರ ಅರ್ಜಿಯನ್ನು 1901ನೆ ಇಸವಿ ನವೆಂಬರ್ ತಿಂಗಳು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಾಸುದೇವರಾವ್ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1909ನೆ ಇಸವಿ ನವೆಂಬರ್ ತಿಂಗಳು 15ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ1909—10ನೆ ಇಸವಿ ಮಿ॥ ಅರ್ಜೀ ನಂಬರ್ 281.

ಬೆಂಗಳೂರು ದೊಡ್ಡ ಮಾವಹಳ್ಳಿಲಿದ್ದು ಮೃತಪಟ್ಟ ಬಿ. ಲಕ್ಷ್ಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬಿ. ವೆಂಕಟಪ್ಪ ಮೃತಪಟ್ಟ ಸದರೀ ಬಿ. ಲಕ್ಷ್ಮಯ್ಯನಿಗೆ ಮುಖ್ಯ ವಾರಸಿದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಬಿ. ಲಕ್ಷ್ಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ (2,399) ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಬೆಂಗಳೂರು ದೊಡ್ಡ ಮಾವಹಳ್ಳಿಲಿರುವ ಚಿಕ್ಕ ಬೈಯ್ಯಣ್ಣನ ಮಗ ವೆಂಕಟಪ್ಪನವರ ಅರ್ಜಿಯನ್ನು ಸ್ಯ 1909ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಿ. ಲಕ್ಷ್ಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1909ನೆ ಇಸವಿ ನವೆಂಬರ್ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ನಾಗಪ್ಪ,
ಸಬ್ ಜಡ್ಜ್.

ನೋಟಿಸ್.

ಮೈಸೂರು ಸ್ವದೇಶಿ ಶ್ರೀ. ಶ್ರೀನಿವಾಸಧರ್ಮ ಆಪದ್ಧನ ಕಂಪನಿ ಲಿಮಿಟೆಡ್ ಆಫೀಸ್, ಮೈಸೂರು.

ಈ ಮೇಲ್ಕಂಡ ಕಂಪನಿಯ ಮೆಂಬರುಗಳು 19—9—1909 ಮತ್ತು 10—10—1909ರಲ್ಲು ಸಭೆ ಸೇರಿ ನಡಸಿದ ಎಕ್ಸ್ಟ್ರಾರ್ಡನೇರಿ ಜನರಲ್ ಮೀಟಿಂಗ್ ಮತ್ತು ಈ ಫರಂ ಮೀಟಿಂಗಿನಲ್ಲಿ ಈ ಕಂಪನಿಯನ್ನು ವೈಂಡಪ್ ಮಾಡಬೇಕೆಂತಲೂ ಮತ್ತು ಈ ಪ್ರೊಸೀಡಿಂಗ್ಸ್‌ನಲ್ಲಿ ಗೊತ್ತುಮಾಡಿರುವ ಲಿಕ್ವಿಡೇಟರುಗಳು ಕಂಪನಿಯಲ್ಲಿ ಹಾಲಿ ಉಳಿದಿರತಕ್ಕ ಹಣದಲ್ಲಿ ಪ್ರೊಸೀಡಿಂಗ್ಸ್‌ನಲ್ಲಿ ನಮೂದಿಸಿರುವ ಜನಗಳಿಗೆ ಕಂಪನಿಯಿಂದ ಕೊಡಬೇಕಾದ ಹಣವನ್ನು ಪಾವತಿಮಾಡಿ ಉಳಿಯತಕ್ಕ ಹಣವನ್ನು ಮತ್ತು ಕಂಪನಿಯಲ್ಲಿರತಕ್ಕ ಕಂಪನಿಯ ವಿಶಿಷ್ಟ ಸ್ವತ್ತನ್ನು ವಿಕ್ರಯಿಸಿ ಅದರಿಂದ ಬರತಕ್ಕ ಹಣವನ್ನು ಸಹ ಕಂಪನಿಯ ಮೆಂಬರುಗಳಿಗೆ ದಾಮಾಷಾಯಿ ಪ್ರಕಾರ ಹಂಚಿಕೊಡಬೇಕೆಂದು ವಗೈರೆ ಪ್ರೊಸೀಡಿಂಗ್ಸ್ ಮಾಡಿದ್ದನ್ನು ಮೈಸೂರು ಗವರ್ನಮೆಂಟ್ ಜಾಯಂಟ್ ಸ್ಟಾಕ್ ಕಂಪನಿ ರಿಜಸ್ಟ್ರಾರ್‌ರವರು ರಿಜಸ್ಟರ್ ಮಾಡಿಕೊಂಡು ಈ ಕಂಪನಿಯನ್ನು ವಾಲಂಟರಿ ವೈಂಡಪ್ ಮಾಡತಕ್ಕದ್ದೆಂಬುದಾಗಿ 9—11—1909ನೆ ಮುಕ್ರಂ 428ನೆ ನಂಬರು ಸರ್ಟಿಫಿಕೇಟ್ ಕೊಟ್ಟು ಇರುತ್ತಾರಾಗಿ ಈ ಕಂಪನಿಯು ಈ ಲಾಗಾಯಿತು ವಾಲಂಟರಿ ವೈಂಡಪ್ ಮಾಡಲ್ಪಟ್ಟಿರುತ್ತೆಂಬುದಾಗಿಯೂ ಪ್ರೊಸೀಡಿಂಗ್ಸ್‌ನಂತೆ ಕ್ರಮಗಳ ನಡಸಲು ಲಿಕ್ವಿಡೇಟರುಗಳಿಗೆ ಕೂಡ್ಲೆ ಸುಫರ್ದು ಮಾಡಲಾಗುತ್ತೆಂಬುದಾಗಿಯು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸಿ ಇರುತ್ತೆ.

ತಾರೀಖು 15ನೆ ಮಾಹೆ ನವೆಂಬರು ಸ್ಯ 1909ನೆ ಇಸವಿ.

ಪ. ಸಾ. ವೆಂಗಟಸಾಮಿಯಾರ್,
ಎಂದು ಅರವದಲ್ಲಿ ರುಜು ಇಟ್ಟ,
ಸೆಕ್ರಟೆರಿ ಮತ್ತು ಟ್ರೆಜರರ್.